**ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರ ಕಛೇರಿ,**
**ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.**
(ಕಛೇರಿ:08262-234904 ಫ್ಯಾಕ್ಸ್:08262-230032 ಇ-ಮೇಲ್:dcfbhadra@yahoo.com)

ಸಂಖ್ಯೆ:ಎ5/ಭೂಮಿ/ಸಿಆರ್-9/2008-09 ದಿನಾಂಕ:11-12-2019.

**ಇವರಿಗೆ,**

ಕುಲಸಚಿವರು,
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ-577451,
ಶಿವಮೊಗ್ಗ ಜಿಲ್ಲೆ.

ಮಾನ್ಯರೇ,

**ವಿಷಯ:** ಕುವೆಂಪು ವಿಶ್ವವಿದ್ಯಾನಿಲಯಕ್ಕೆ ನೀಡಿರುವ 230 ಎಕರೆ ಭೂಪ್ರದೇಶದ ಗುತ್ತಿಗೆ ಅವಧಿ ನವೀಕರಣ ಕುರಿತು.

**ಉಲ್ಲೇಖ:** 1. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 14-11-2019.
2. ತಮ್ಮ ಕಛೇರಿ ಪತ್ರ ಸಂಖ್ಯೆ: ಕುವಿ:ಕುಸ:ಎ:6/5334/2019-20 ದಿನಾಂಕ: 29-11-2019.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ 230 ಎಕರೆ ಅರಣ್ಯ ಪ್ರದೇಶದ ಬದಲಿಗೆ ಬದಲಿ ಜಮೀನನ್ನು ಇಲಾಖೆಗೆ ನೀಡಬೇಕಾದದ್ದು, ಉಪಯೋಗಿ ಸಂಸ್ಥೆಯ ಕೆಲಸವಾಗಿರುತ್ತದೆ. 301.27 ಎಕರೆ ಜಮೀನನ್ನು 2009ರಲ್ಲಿಯೇ ಅರಣ್ಯ ಇಲಾಖೆಗೆ ವರ್ಗಾಯಿಸಿರುವುದಾಗಿ ತಿಳಿಸಿರುತ್ತೀರಿ. ಆದರೆ ಸದರಿ ಪ್ರದೇಶವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಕೆಸವಿನಮನೆ ಗ್ರಾಮ ಸ.ನಂ. 38, 39, 40, 45, 46, 49 ರಲ್ಲಿ 1835.18 ಎಕರೆ ಡೀಮ್ಡ್ ಫಾರೆಸ್ಟ್‌ನಲ್ಲಿ ಸೇರಿದ್ದು, 140.62 ಎಕರೆ ಪ್ರದೇಶವು ಒತ್ತುವರಿಯಾಗಿದ್ದು, ಈ ಬಗ್ಗೆ ನಿಮಗೆ ಉಲ್ಲೇಖಿತ (1)ರ ಪತ್ರದಲ್ಲಿ ಈಗಾಗಲೇ ನಿಮಗೆ ಮಾಹಿತಿಯನ್ನು ನೀಡಲಾಗಿದೆ.

ದಿನಾಂಕ: 19-09-2018 ರಂದು ಆನ್‌ಲೈನ್ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಇಲ್ಲಿಯವರೆಗೆ ನಮ್ಮ ಕಛೇರಿಯಲ್ಲಿಯೇ ಕಡತ ಬಾಕಿ ಇರುವಂತೆ ನೀವು ಉಲ್ಲೇಖಿತ (2) ರ ಪತ್ರದಲ್ಲಿ ತಿಳಿಸಿರುತ್ತೀರಿ. ದಿನಾಂಕ: 19-09-2018 ರಿಂದ ಇಲ್ಲಿಯವರೆಗೆ ನಡೆದಿರುವ ಪತ್ರ ವ್ಯವಹಾರಗಳನ್ನು ಪರಿಶೀಲಿಸಿ ಕಡತ ವಿಳಂಬವಾಗಲು ಕಾರಣವೇನು ಎಂಬುದನ್ನು ತಿಳಿದುಕೊಳ್ಳುವಂತೆ ಕೋರಿದೆ.

ಗುತ್ತಿಗೆ ನೀಡಿರುವ 230 ಎಕರೆ ಬದಲಿಗೆ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಅಧಿಕೃತವಾಗಿ ಯಾವುದೇ ಜಮೀನು ನೀಡಿರುವುದಿಲ್ಲ. ಆದ್ದರಿಂದ, ನೀವು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚಿಸಿ ಮೇಲ್ಕಂಡ ಪ್ರದೇಶಗಳಲ್ಲಿ ಅರಣ್ಯ ಇಲಾಖೆಗೆ ನೀಡಿರುವ ಜಾಗವನ್ನು ನಕಾಶೆಯಲ್ಲಿ ಗುರುತಿಸಿ ಸದರಿ ಪ್ರದೇಶವನ್ನು ಅರಣ್ಯವೆಂದು ಇಂಡೀಕರಣಗೊಳಿಸಿದಲ್ಲಿ ಮಾತ್ರ 230 ಎಕರೆ ಗುತ್ತಿಗೆ ಪ್ರದೇಶವನ್ನು ನವೀಕರಣಗೊಳಿಸಲು ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗುವುದು. ತಪ್ಪಿದಲ್ಲಿ ಗುತ್ತಿಗೆ ಅವಧಿಯನ್ನು ನವೀಕರಿಸಲು ಬರುವುದಿಲ್ಲ ತಿಳಿಯಿರಿ.

-2,,

ಗುತ್ತಿಗೆ ಅವಧಿ ನವೀಕರಣ ಆಗುವವರೆಗೆ ಯಾವುದೇ ಅರಣ್ಯೇತರ ಚಟುವಟಿಕೆಗಳನ್ನು ನಡೆಸಬಾರದೆಂದು ನಿಮಗೆ ಅನೇಕ ಬಾರಿ ತಿಳಿಸಿದ್ದರೂ ಸಹ ಅರಣ್ಯೇತರ ಚಟುವಟಿಕೆಗಳನ್ನು ನಡೆಸುತ್ತಿರುವ ಬಗ್ಗೆ ಈಗಾಗಲೇ ಅನೇಕ ದೂರುಗಳು ಬಂದಿರುತ್ತವೆ. ವಿಶ್ವವಿದ್ಯಾನಿಲಯವು ಸರ್ಕಾರದ ಒಂದು ಸಂಸ್ಥೆಯಾಗಿರುವುದರಿಂದ ಇಲಾಖೆಯು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ.

ಅಭಿವೃದ್ಧಿ ಕಾಮಗಾರಿಗಳು ಅರ್ಧಕ್ಕೆ ನಿಂತಿರುವುದಕ್ಕೆ ಅನುದಾನ ಬಳಕೆಯಾಗದೇ ಇರುವುದಕ್ಕೆ ರ್‍ಯಾಂಕಿಂಗ್ ಮಟ್ಟದಲ್ಲಿ ಹಿನ್ನಡೆಯಾಗುವುದಕ್ಕೆ ಇಲಾಖೆಯು ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗಿರುವುದಿಲ್ಲ. ತಮಗೂ ಸಹ ಕಾನೂನಿನ ಬಗ್ಗೆ ಅರಿವಿದ್ದು, ಕಾನೂನಿನಡಿಯಲ್ಲಿ ಗುತ್ತಿಗೆ ನವೀಕರಣ ಪ್ರಕ್ರಿಯೆ ಪೂರ್ಣಗೊಳ್ಳಲು ಉಪಯೋಗಿ ಸಂಸ್ಥೆಯು ಸಹಕರಿಸಿದಲ್ಲಿ ಮಾತ್ರ ಗುತ್ತಿಗೆ ಅವಧಿಯನ್ನು ನವೀಕರಿಸಲು ಕ್ರಮಕೈಗೊಳ್ಳಲಾಗುವುದು. ಅಲ್ಲದೆ ಅರಣ್ಯ ಸಂರಕ್ಷಣಾ ಕಾಯ್ದೆ 1980ರಡಿಯಲ್ಲಿ ಆನ್‌ಲೈನ್‌ನಲ್ಲಿ ಗುತ್ತಿಗೆ ನವೀಕರಣದ ಬಗ್ಗೆ ಇರುವ ಎಲ್ಲಾ ನಿಬಂಧನೆಗಳನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ ಮಾತ್ರ ಗುತ್ತಿಗೆ ಅವಧಿಯು ನವೀಕರಣವಾಗುತ್ತದೆ. ಆದ್ದರಿಂದ 230 ಎಕರೆ ಗುತ್ತಿಗೆ ನೀಡಿರುವ ಅರಣ್ಯ ಪ್ರದೇಶದ ಬದಲಿಗೆ 950.25 ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ನೀಡಿರುವ ಜಾಗವನ್ನು ನಕಾಶೆಯಲ್ಲಿ ಗುರುತಿಸಿ ಸದರಿ ಪ್ರದೇಶವನ್ನು ಅರಣ್ಯವೆಂದು ಇಂಡೀಕರಣಗೊಳಿಸಿ ಇಲಾಖೆಗೆ ಹಸ್ತಾಂತರಿಸಿದಲ್ಲಿ ಮಾತ್ರ 230 ಎಕರೆ ಗುತ್ತಿಗೆ ಪ್ರದೇಶವನ್ನು ನವೀಕರಣಗೊಳಿಸಲು ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗುವುದು. ತಪ್ಪಿದಲ್ಲಿ ಗುತ್ತಿಗೆ ಅವಧಿಯನ್ನು ನವೀಕರಿಸಲು ಬರುವುದಿಲ್ಲ ತಿಳಿಯಿರಿ.

ನಿಮ್ಮ ವಿಶ್ವಾಸಿ,

ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.